## ಬುತ್ತಿ ಚಿಗುರು

### ಸೇರಿಗೆ ಸವ್ವಾಸೇರು



ಗುಂಡೂರಾಯರು ಕುಖ್ಯಾತ ಲಾಯರು. ತಮ್ಮ ಕಕ್ಷಿದಾರರಿಂದ ಹೆಚ್ಚಿನ ಹಣ ಪೀಕುತ್ತಾರೆ ಎನ್ನುವುದಕ್ಕೆ ಅವರು ಫೇಮಸ್ಸು. ಒಮ್ಮೆ ತಮ್ಮ 30 ವರ್ಷದ ಮಗ ಹಠಾತ್ ಹೃದಯಾಘಾತದಿಂದ ಆಸ್ಪತ್ರೆ ಸೇರಿದ. 45 ದಿನಗಳ ಸಾವು ಬದುಕಿನ ಹೋರಾಟದ ನಂತರ ಮಗ ಗುಣಮುಖನಾದ. ಅದೇ ಖುಷಿಯಲ್ಲಿ ಗುಂಡೂರಾಯರು ಡಾಕ್ಟರ್ ಹತ್ತಿರ ಮಾತನಾಡುತ್ತ, 'ನನ್ನ ಮಗನ ಪ್ರಾಣ ಉಳಿಸಿದ್ದೀರಿ, ನಿಮ್ಮ ಋಣ ತೀರಿಸಲಾರೆ, ತಮ್ಮ ಫೀಸ್ ಎಷ್ಟು ಹೇಳಿ' ಎಂದು ಕೇಳಿದರು. ಈ ಮೊದಲು ಅವರು ಮಗ ಗುಣಮುಖನಾಗದಿದ್ದರೆ ಕೇಸು ಜಡಿಯುವುದಾಗಿ ವೈದ್ಯರಿಗೆ ಹೇಳಿದ್ದರು. ಅದನ್ನು ನೆನೆಸಿಕೊಂಡ ವೈದ್ಯರು, 'ನಿಮ್ಮ ಮಗನನ್ನು ಬದುಕಿಸುವ ನನ್ನ ಪ್ರಯತ್ನದಲ್ಲಿ ಸೋತಿದ್ದರೆ, ನನ್ನಿಂದ ಎಷ್ಟು ಹಣ ಪರಿಹಾರಕ್ಕಾಗಿ ದಾವೆ ಹೂಡುತ್ತಿದ್ದೀರಿ, ಹೇಳಿ?' ಎಂದ. 'ಕನಿಷ್ಠ 10 ಕೋಟಿ ರೂಪಾಯಿಗೆ ದಾವೆ ಹಾಕುತ್ತಿದ್ದೆ' ಎಂದರು. ವೈದ್ಯರು, 'ಹಾಗಾದ್ರೆ ಅದರ ಅರ್ಧದಷ್ಟು, ಅಂದರೆ ನನ್ನ ಫೀಸ್ 5 ಕೋಟಿ ರೂಪಾಯಿ' ಎಂದರು. ಕ್ಷಣ ಗುಂಡೂರಾಯರ ಹೃದಯ ಬಡಿತವೇ ನಿಂತ ಹಾಗಾಯಿತು.

**ಆರ್. ಎಸ್. ಪ್ರಕಾಶ್**

---



### ದೇಶ ಸುತ್ತಿದರೆ ಏನಾಗುತ್ತೆ?

6ನೇ ತರಗತಿಯಲ್ಲಿ ಓದುತ್ತಿರುವ ಚಿಂಟುಗೆ ಮನೆಯಲ್ಲಿ ಕನ್ನಡ ಪಾಠ ನಡೆದಿತ್ತು. ಕನ್ನಡ ಮನೆಯ ಮಾತಾದ್ದರಿಂದ ಓದಲು ಬರೆಯಲು ಅವನಿಗೆ ಕಷ್ಟ ಏನಿರಲಿಲ್ಲ. ಆದರೆ ಗಾದೆ, ನುಡಿಗಟ್ಟುಗಳೆಂದರೆ ಗೊಂದಲ ಅವನಿಗೆ. 'ದೇಶ ಸುತ್ತು ಕೋಶ ಓದು' ಗಾದೆಯನ್ನು ಅವನ ತಂದೆ ವಿವರಿಸಿ ಹೇಳುತ್ತಿದ್ದರು. 'ದೇಶ ಸುತ್ತಿದರೆ ಏನಾಗುತ್ತಪ್ಪಾ?' ಎಂದು ಕೇಳಿದರೆ, ಟೇಬಲ್ ಸುತ್ತ ಸುತ್ತುತ್ತಿದ್ದ ಚಿಂಟು, 'ದೇಶ ಸುತ್ತಿದರೆ ಏನಾಗುತ್ತೆ? ಸುಸ್ತಾಗತ್ತೆ...' ಎನ್ನಬೇಕೆ?.

**ಅಂಬಿಕಾ ಆರ್.**